ಸಂಧ್ಯಾ ಅನುಷ್ಠಾನಗಳನ್ನು ಮಾಡಲು ನದಿಯ ತೀರಕ್ಕೆ ಹೋದ ಮಂಡನ ಮಿಶ್ರ ಸ್ವಲ್ಪ ಹೊತ್ತಿನಲ್ಲಿ ಹಿಂತಿರುಗಿ ಬರುತ್ತಾರೆ. ಇಂದು ರಾತ್ರಿ ಅವರೊಂದಿಗೆ ತುಂಬಾ ಮಾತನಾಡಬೇಕು. ಹೀಗೆ ಅವರೊಂದಿಗೆ ಏಕಾಂತದಲ್ಲಿ ಮಾತನಾಡುವ ಕೊನೆಯ ರಾತ್ರಿಯೂ ಇದಾಗಬಹುದು. ಅವರೊಳಗೂ ಇಂತಹ ಭಾವನೆಗಳೂ ಆಲೋಚನೆಗಳೂ ಇಲ್ಲದಿರುವುದೇ? ಅವರನ್ನು ಅವಳು ಚೆನ್ನಾಗಿ ಬಲ್ಲಳು. ಜ್ಞಾನದ ಮೂಲಕವೂ, ದೇಹದ ಮೂಲಕವೂ ಅವಳಿಂದ ಅವರು ಪಡೆದ ಆನಂದವನ್ನು ಅವರಿಂದ ಅಷ್ಟು ಸುಲಭವಾಗಿ ತೊರೆಯಲಾಗುವುದೇ? ಆದರೆ, ನಾಳೆ ಆ ಸನ್ಯಾಸಿ ಶಂಕರ ಮತ್ತೆ ಬಂದರೆ ಏನು ಮಾಡುವುದು? ಅವರು ಖಂಡಿತವಾಗಿಯೂ ಬರುವರೆಂದು ಯಾಕೆ ನನ್ನ ಮನಸ್ಸು ಇಷ್ಟು ಖಚಿತವಾಗಿ ನಂಬುತ್ತಿದೆ?

ಸುಮಾರು ನಲವತ್ತು, ನಲವತ್ತೈದು ದಿನಗಳ ಹಿಂದೆ ಒಂದು ದಿನ ಬೆಳಗ್ಗೆ, ತನ್ನ ಮನೆಯ ಮಂಟಪದಲ್ಲಿ ಬ್ರಾಹ್ಮಣರು ತುಂಬಿ ಶ್ರಾದ್ಧ ಮಾಡುತ್ತಿರುವಾಗ ಒಬ್ಬ ಯುವ ಸನ್ಯಾಸಿ ಅಂಗಳದೊಳಗೆ ಬಂದು ಅವರ ಮುಂದೆ ನಿಂತ. ಶ್ರಾದ್ಧದ ಸಮಯದಲ್ಲಿ ಒಬ್ಬ ಸನ್ಯಾಸಿ, ಅದೂ ಹೊರ ಬಾಗಿಲು ಹಾಕಿರುವಾಗ ಹೀಗೆ ಹದ್ದು ಮೀರಿ ಅಚಾನಕ್ಕಾಗಿ ಒಳಗೆ ಪ್ರವೇಶಿಸಿದನ್ನು ಕಂಡು ಕೋಪಗೊಂಡ ಮಂಡನ ಮಿಶ್ರ, "ಯಾರು ನೀವು? ಹೇಗೆ ಒಳಗೆ ಬಂದಿರಿ?" ಎಂದು ಗದರಿಸಿ ಕೇಳಿದನು.

ಆತ ಯಾವ ಗಡಿಬಿಡಿಯೂ ಇಲ್ಲದೆ, "ನಾನು ಶಂಕರ. ಅದ್ವೈತ ಪ್ರಚಾರಕ. ಆಕಾಶ ಮಾರ್ಗವಾಗಿ ಒಳಗೆ ಬಂದೆ" ಎಂದು ನಗುತ್ತಲೇ ಉತ್ತರಿಸಿದರು.

"ಗೋಡೆ ಹಾರಿ ಬರುವುದು ನಿಮ್ಮ ಭಾಷೆಯಲ್ಲಿ 'ಆಕಾಶ ಮಾರ್ಗವಾಗಿ' ಬರುವುದೆಂದೇ?" ಎಂದು ಅಪಹಾಸ್ಯ ಮಾಡಿ ನಕ್ಕ ಮಂಡನ ಮಿಶ್ರ ತನ್ನ ಕೋಪವನ್ನು ಅಡಗಿಸಿಕೊಂಡು ಬಂದವರೊಂದಿಗೆ ಮಾತನಾಡಿದರು. "ನಾನು ಶ್ರಾದ್ಧ ಕಾರ್ಯಗಳಲ್ಲಿ ತೊಡಗಿರುವೆ. ಇಂತಹ ಸಮಯದಲ್ಲಿ ಹೊರಗಿನ ವ್ಯಕ್ತಿಗಳನ್ನು ಒಳಗೆ ಅನುಮತಿಸುವುದೋ ಅಥವಾ ಅವರೊಂದಿಗೆ ಮಾತನಾಡುವುದೋ ಪಿತೃಗಳನ್ನು ಕೆಣಕುವ ಕಾರ್ಯ. ಏನು ಬೇಕು ನಿಮಗೆ?"

"ನಿಮ್ಮ ಗುರು ಕುಮಾರಿಲ ಭಟ್ಟರೊಂದಿಗೆ ವಾದ ಮಾಡಲು ಪ್ರಯಾಗಕ್ಕೆ ಹೋಗಿ ಅವರನ್ನು ನೋಡಿದೆ. ಆದರೆ, ಪಾಪ ಅವರು ನನ್ನೊಂದಿಗೆ ವಾಗ್ವಾದ ಮಾಡುವ ಸ್ಥಿತಿಯಲ್ಲಿರಲಿಲ್ಲ. ತನ್ನ ಬೌದ್ಧ ಗುರುವಿಗೆ ತಾನು ದ್ರೋಹ ಮಾಡಿದ್ದಾಗಿ ಅವರಾಗೇ ಅಂದುಕೊಂಡು ಪಾಪ ಪ್ರಜ್ಞೆಯಿಂದ ತನ್ನ ಸುತ್ತ ಹೊಟ್ಟನ್ನು ಸುರಿದುಕೊಂಡು ಅದಕ್ಕೆ ಬೆಂಕಿಯಿಟ್ಟು, ಆ ಜ್ವಾಲೆಯಲ್ಲಿ ದೇಹ ಸ್ವಲ್ಪ ಸ್ವಲ್ಪವೇ ದಹಿಸುವಂತೆ ತನ್ನನ್ನು ಕೊಂದುಕೊಳ್ಳುತ್ತಿದ್ದರು. ನನ್ನಿಂದ ಅವರನ್ನು ಕಾಪಾಡಲು ಆಗಲಿಲ್ಲ. ಸಾಯುವ ಮುನ್ನ, 'ಮಾಹಿಷ್ಮತಿಯಲ್ಲಿ ಮೀಮಾಂಸೆಯಲ್ಲಿ ನಿಸ್ಸೀಮ ಪಂಡಿತನಾದ ಮಂಡನ ಮಿಶ್ರ ಎಂಬ ನನ್ನ ಶಿಷ್ಯನೊಬ್ಬನಿದ್ದಾನೆ. ಅವನೊಂದಿಗೆ ವಾದಿಸಿ ಅವನನ್ನು ಗೆಲ್ಲು. ಅವನು ನಿನ್ನ ಅದ್ವೈತ ತತ್ವವನ್ನು ಒಪ್ಪಿಕೊಂಡರೆ ಜಗತ್ತೇ ಅದನ್ನು ಸ್ವೀಕರಿಸುತ್ತದೆ' ಎಂದು ಹೇಳಿ ನನ್ನನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ."

ಗುರು ಕುಮಾರಿಲ ಅವರ ಹೆಸರನ್ನು ಕೇಳಿದ ಕೂಡಲೇ ಮಂಡನ ಮಿಶ್ರ ಶಾಂತವಾದರು. ಕುಮಾರಿಲರ ಕ್ರೂರವಾದ ಆತ್ಮಹತ್ಯೆಯಿಂದ ಬಹಳ ನೊಂದುಕೊಂಡ ಮಂಡನ ಮಿಶ್ರ, ತನ್ನ ಗುರುವಿನ ಕೊನೆಯ ಆಸೆಯನ್ನು ನೆರವೇರಿಸುವ ಕರ್ತವ್ಯ ಭಾವನೆಯಿಂದ ಸನ್ಯಾಸಿಯೊಂದಿಗೆ ವಾದ ಮಾಡಲು ಒಪ್ಪಿಕೊಂಡರು.

"ಯುದ್ಧಕ್ಕೆ ಕರೆಯುವ ವೀರನನ್ನೂ, ವಾದಕ್ಕೆ ಕರೆಯಲ್ಪಡುವ ಪಂಡಿತನನ್ನೂ 'ಒಲ್ಲೆ' ಎಂದು